doc-20
TP-2

Regd No M 1229 | 43rd Year | Sri 'Satyavadi' Mysore | 26—3—1959

ಸ್ವಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

# ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎ. ನಿ ಸುಬ್ಬರಾಯುರು [ಬಿಡಿ ಪ್ರತಿ3ಪೈ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

# ಮಾರಾಟಕರ ಪ್ರತಿಭಟಿಸಿ ಮದರಾಸಿನಲ್ಲಿ ವಾಪಾರಿಗಳ ಹರತಾಳ

ಮದ್ರಾಸು 25 — ಏಪ್ರಿಲು 1 ನೇ ತಾ|| ನಿಂದ ನಾಶವಾಗುವ ಪದಾರ್ಥಗಳಾದ ತರಕಾರಿಗಳು, ಹಣ್ಣು ಮಾಂಸಗಳ ಮೇಲೆ ಪ್ರಾಂತ ಸರ್ಕಾರ ಮಾರಾಟ ತೆರಿಗೆಯನ್ನು ವಿಧಿಸಲುವದನ್ನು ಪ್ರತಿಭಟಿಸಲು ಈ ದಿನ ಅವುಗಳ ಒಟ್ಟಾರೆ ಮತ್ತು ಚಿಲ್ಲರೆ ವರ್ತಕರು ಇಲ್ಲಿ ಹರತಾಳ ಆಚರಿಸಿದರು ಮಧ್ಯಾಂತರದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅಂಗಡಿಗಳು ಹರತಾಳ ಆಚರಿಸಿದವು

## ಟಬೆಬ್ಬನಾದ್ಯಂತ ಬಿಕ್ಕಟ್ಟಿನ ಸ್ಥಿತಿ

ಕಾಲಿಂಪಾಂಗ್ 25 — ಲಾಸಾದಲ್ಲಿ ಹೊಡೆದಾಟ ನಿಂತಿದ್ದಾಗ್ಯೂ ಟಿಬೆಟ್ಟಿನಾದ್ಯಂತ ಬಿಕ್ಕಟ್ಟಿನ ಪರಿಸ್ಥಿತಿ ಇದೆ ಚೀನೀಯರು ಮೊದಲು ಗೋಳೀಬಾರು ನಿಲ್ಲಿಸಿದನಂತರ ಟಿಬೆಟ್ಟಿನವರು ನಿಲ್ಲಿಸಿದರು ದಂಗೆಕೋರ ಸೇನಿಕರು ಲಾಸಾದಿಂದ ಏಪ್ರಿಲ್ 23 ವರ್ಷದ ದಲಾಯಿ ಲಾಮಾ ಎಲ್ಲಿದ್ದಾರೆಂಬುದು ಗೊತ್ತಿಲ್ಲ

## ಮೌನದಿಂದ ಪ್ರತಿಭಟನೆ

ಗುರುವಾಯೂರು: 25 — ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್ ಈ ಮಠಕ್ಕೆ ಇಲ್ಲಿಗೆ ಬಂದಾಗ 1 ಸಹಸ್ರಕ್ಕೆ ರದ ಜನ ಮೌನ ಪ್ರದರ್ಶನ ಮಾಡಿದರಾಗಲಿ ಉಪಾಸನಾ ಸ್ವಾತಂತ್ರ್ಯ ಪ್ರದರ್ಶನ ಮಾಡಿದರು

## ಘಾರಂಗಳು

ಯಿ 24 — ಜನವರಿ 31 ಂಬಾಯಿನಲ್ಲಿ 404 ಸಹ ಂಗಳು ಇದ್ದವು ಅವು ಜೆ ಲಸಮಾಧಿಯಾಗಿವೆ ಎಂದು ವಿಧಾ ಸಭೆಯಲ್ಲಿ ಸಹಕಾರ ಮಂತ್ರಿ ತಿಳಿಸಿ

## ಬ್ರಿಟ್ಗೆ ಮೈಸೂರಿನ ಸ್ಪೀಕರ್

ಮೈಸೂರು ವಿಧಾನ ಸಭೆಯ ಸ್ಪೀಕರರಾದ ಶ್ರೀ.ಎಸ್. ಆರ್. ಕಂಠಿಯವರು ವಿಮಾನದಲ್ಲಿ ಏಪ್ರಿಲು 9 ನೇ ತಾ|| ಬೊಂಬಾಯಿನಿಂದ ಬ್ರಿಟ್ಗೆ ತೆರಳಿ 6 ವಾರ ಅಲ್ಲಿ ಪ್ರವಾಸ ಮಾಡುವರು.

## ಹೋಲಿಯಲ್ಲಿ ಕೆಲವರ ಬಂಧನ

ಬೆಂಗಳೂರಿನಲ್ಲಿ ನಿನ್ನೆ ಹೋಳಿ ವೈಭವದಿಂದ ಆಚರಿಸಲ್ಪಟ್ಟಿತು ಈ ಸಂದರ್ಭದಲ್ಲಿ ಕೆಲವು ಬಣ್ಣ ಎರಚುವವರ ಬಂಧನವಾಗಿದ್ದಿತು

## ನೊಂದವರಿಗೆ ನೆರವು

ಅರಪೀಕೆರೆಯಲ್ಲಿ 174 ಗುಡಿಸಲುಗಳು ಭಸ್ಮವಾಗಿ ಕಷ್ಟಕ್ಕೊಳಗಾದವರ ಸಹಾಯಾರ್ಥ ಕೇಂದ್ರ ಮಂತ್ರಿ ಪಂ|| ಪಂತರವರು ರೂ 1 ಸಹಸ್ರ ನೆರವು ನೀಡಿರುವರು

## ಲಕ್ನೋನಲ್ಲಿ ಗುಂಡಿನೇಟು

ಲಕ್ನೊ 25 — ಈ ದಿನ ಲಕ್ನೋದಲ್ಲಿ ಹೋಲಿ ಸಂಬಂಧ ಘರ್ಷಣೆ ಏಗಿ ಪೋಲೀಸರು ಗೋಳೀಬ್ಬಾರು ಮಾಡಿದ ಕಾರಣ ನಾಲ್ವರು ಅಲ್ಪಸ್ವಲ್ಪ ಗಾಯಗೊಂಡರು

## ಸರ್ಕಾರಿ ಎತ್ತಿಹಾಕಲು

### ನಾಸೆರ್ ಯತ್ನ

ಲಂಡನ್ 24 — ಸಂಯುಕ್ತ ಅರಬ್ ಗಣರಾಜ್ಯದ ಅಧ್ಯಕ್ಷ ನಾಸೆರರು ಇರಾಕಿ ಸರ್ಕಾರವನ್ನು ಬುಡಮೇಲು ಮಾಡುವ ಯತ್ನ ಮಾಡಿದರೆಂದು ಮೋಸಲ ದಂಗೆ ಪ್ರಕರಣದಲ್ಲಿ ವಿಚಾರಣೆಗೆ ಗುರಿ ಆಗಿರುವ ಅಧಿಕಾರಿಗಳು ಇರಾಕಿನ ನ್ಯಾಯಾಲಯವೊಂದರಲ್ಲಿ ನುಡಿದರು

## ಮಹಿಳೆಯರಿಗೆ ಉದ್ಯೋಗ

ನವ ದೆಹಲಿ 25 — ಕೇಂದ್ರ ಸರ್ಕಾರದ ಸೇವೆಗಳಿಗೆ ಸೇರಲು ವಿವಾಹಿತ ಮಹಿಳೆಯರಿಗೆ ಯಾವ ಆತಂಕವೂ ಇರುವದಿಲ್ಲ ಆದರೆ, ಭಾರತ ಸರ್ಕಾರದವರು ಸೇವಾ ನಿಯಮಗಳ ಪ್ರಕಾರ ಐ ಎ ಎಸ್, ಐ ಪಿ ಎಸ್ ಮತ್ತು ಐ ಎಫ್ ಎಸ್ ಗಳಂಥಹ ಕೆಲವು ಸೇವೆಗಳಿಗೆ ವಿವಾಹಿತ ಮಹಿಳೆಯರನ್ನು ನೇಮಿಸಿಕೊಳ್ಳಕೂಡದೆಂಬ ತೀರ್ಮಾನವನ್ನು ಕೈಗೊಳ್ಳುವರು ಸರ್ಕಾರದವರು ಇಂಥಹ ಪ್ರತಿಯೊಂದು ಪ್ರಸಂಗವನ್ನು ಅದರ ಯೋಗ್ಯತೆಯ ಮೇಲೆ ನಿರ್ಣಯಿಸುವುದು ಎಂದು ಕೇಂದ್ರ ಗೃಹ ಮಂತ್ರಿ ಶ್ರೀ ಬಿ ಎನ್ ದಾತಾರರು ಲೋಕಸಭೆಯಲ್ಲಿ ತಿಳಿಸಿದರು.

## ಸ್ಥಾಪಕರ ದಿನಾಚರಣೆ

ಮೈಸೂರು 25 — ಡಿಬನುವಯ್ಯ ನವರ ವಿದ್ಯಾ ಸಂಸ್ಥೆ ಸ್ಥಾಪಕರ ದಿನಾಚರಣೆಯು ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಅಣ್ಣಾರಾವ್ ಗಣಮುಖಿಯವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಸ್ಥಾರ್ಥನಾನಂತರ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀ ಬಿ ವಿ ಬನುಮಯ್ಯನವರು ಸ್ವಾಗತ ಭಾಷಣಮಾಡಿದರು. ಸ್ಮಾರಕ ಪಾರಿತೋಷಕಗಳನ್ನು ನಿವೃತ್ತರಾಗಲಿರುವ ಇಬ್ಬರು ಉಪಾಧ್ಯಾಯಿನಿಯರಿಗೆ ಕೊಡಲಾಯಿತು ಅಧ್ಯಕ್ಷರು ಸೂಕ್ತ ಭಾಷಣಮಾಡಿ ದಿವಂಗತ ಬನುಮಯ್ಯನವರ ಗುಣಗಾನ ಮಾಡಿದರು

## ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

27 ತೃತೀಯಾ ಸ್ವಾತಿ

## ವಿವಿಧ ವರ್ತಮಾನ

ನವ ದೆಹಲಿ 25 — ಈ ಸಂಜೆ ಆನಂದಪುರದ ಮಾರ್ಗದಿಂದ ರಸ್ತೆ ಮೂಲಕ ಇಲ್ಲಿಗೆ ಆಗಮಿಸಿದ ಮಾ|| ತಾರಾಸಿಂಗರನ್ನು 15 ಸಾವಿರ ಸಿಕ್ ಗುಂಡಶರು ಹೆಂಗಸರು ಸ್ವಾಗತಿಸಿದರು ಅವರು ದೆಹಲಿಯಲ್ಲಿ ಇರುವ ಅವಧಿಯಲ್ಲಿ ಹಿಂದೂಮಹಾಸಭಾಧ್ಯಕ್ಷ ವೈ|| ರಾಂ ಸಿಂಗ್, ಆಂಗ್ಲೋ-ಇಂಡಿಯರ್ ನಾಯಕ ಫ್ರಾಂಕ್ ಆಂಥನಿ ಮತ್ತು ಪಾರ್ಲಿಮೆಂಟಿನ ಸದಸ್ಯ ಶ್ರೀ ಕುಂಜ್ರು ಇವರ ಭೇಟಿ ಮಾಡುವರು.

ನವ ದೆಹಲಿ 24 — ಆಹಾರ ಮತ್ತು ವ್ಯವಸಾಯ ಶಾಖೆಯು ಪ್ರಾಣಿ ಆಹಾರ ಸಲಹೆಗಾರಾಂತಾದ ಡಬ್ಲ್ಯು. ಥಾರ್ ಗಿಲಿಕ್ ಸರ್ರು ಎಚ್ಚರಿಕೆ ಕೊಟ್ಟು ಗೋವಧೆ ನಿರೋಧ ರದ್ದಾಗುವ ವರಿಗೆ, ಹೆಚ್ಚಿಗೆ ಉತ್ಪಾದನಾಂಹಿತ ದನಗಳ ಸಂಖ್ಯೆ ಮತ್ತೂ ಕೆಡುವದೆಂದು ತಿಳಿಸಿದುವರು

ವಿಯೆಂಟಿಯೇ 25 — ಲಾವೋಸಿನ ರಾಜಧಾನಿ ವಿಯೆಂಟಿಯೇನಲ್ಲಿ ಭಾರತ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರಿಗೆ ಅಭೂತಪೂರ್ವ ಸ್ವಾಗತ ಸಿಕ್ಕಿತು 83 ವರ್ಷದ ದೊರೆ ದೋಗ ಪೀಡಿತರಾದ ಕಾರಣ ರಾಜಕುಮಾರ ಸವಾಂಗ್ ವರ್ಕ್ ಸ್ವಾಗತಿಸಿದರು

ಕರಾಚಿ 25 — ಬಾಗ್ದಾದು ಒಪ್ಪಂದದಿಂದ ಹೊರಬಂದ ಅಂಶವನ್ನು ಇರಾಕ್ ಪಾಕಿಸ್ತಾನಕ್ಕೆ ತಿಳಿಸಿ, ಅದಾಗ್ಯೂ ಪಾಕಿಸ್ತಾನದೊಡನೆ ಹೆಚ್ಚು ಗೆಳೆತನದಿಂದ ಇರುವುದಾಗಿ ಸೂಚಿಸಿದೆ

ಬ್ರಿಟನ್ನಿಗೆ ಕಳೆದ ವರ್ಷ ಸಾಗರದಾಚೆಯ 1250000 ಮಂದಿ ಪ್ರೇಕ್ಷಕರು ಬಂದಿದ್ದರೆಂದೂ, ಅವರು 19600000 ಪೌಂಡುಗಳನ್ನು ಖರ್ಚು ಮಾಡಿದರೆಂದೂ ವರದಿಯಾಗಿದೆ.

## ಬಿಗ್‌ಬೆ ಶತಾಬ್ದಿ

ಲಂಡನ್ನು ನಗರದ ಪಾರ್ಲಿಮೆಂಟು ಗೃಹದ ಮೇಲಿರುವ ಬಿಗ್‌ಬೆ ಗಡಿಯಾರದ ಶತಾಬ್ದವು ಇದೇ ಮೇ ತಾ|| 21 ರಲ್ಲಿ ಬರುವುದು ; ಜಗದ್ವಿಖ್ಯಾತವಾದ ಈ ಗಡಿಯಾರವು ಈ ಸೂರು ವರ್ಷಗಳ ಕಾಲದಲ್ಲಿ ಒಟ್ಟಿಗೆ ನಾಲ್ಕು ಬಾರಿ ಮಾತ್ರ ಗಂಟೆ ಬಾರಿಸದೆ ವೈಫಲ್ಯವಾಗಿತ್ತು. (1) ಪ್ರಥಮ ಜಾಗತಿಕ ಯುದ್ಧ (2) ಎಳನೇ ಎಡ್ವರ್ಡ್‌ರ ಅಂತಿಮ ಸಂಸ್ಕಾರ (3) ಐನನೇ ಜೋರ್ಜ್‌ರ ಅಂತಿಮ ಸಂಸ್ಕಾರ (4) ಆರನೇ ಜೋರ್ಜ್‌ರ ಅಂತಿಮ ಸಂಸ್ಕಾರ. ಈ ಗಡಿಯಾರದ ಗಂಟೆಗಳನ್ನು ಪ್ರಥಮತಃ ರೇಡಿಯೋದಲ್ಲಿ ಕೇಳಿಸುವುದಕ್ಕೆ 1932 ರಲ್ಲಿ ಸಂಯೋಜಿಸಲಾಯಿತು : ಈ ಕೆಳಗಿನ ಚರಣಗಳಿಗೆ ಸರಿಹೊಂದುವಂತೆ ಬಿಗ್‌ಬೆ ಘಂಟಾನಾದವು ಜೋಡಿಸಲ್ಪಟ್ಟಿದೆ—

All through this hour, Lord, be my guide,
And by thy power no foot shall slide.

1859 ರಿಂದ 1913 ರವರೆಗೆ ಈ ಗಡಿಯಾರಕ್ಕೆ ಕೈಗಳಿಂದಲೇ ಚಾವಿಕೊಡುತ್ತಿದ್ದರು ; ಈ ಕೆಲಸಕ್ಕೆ ವಾರಕ್ಕೆ ಮೂರು ದಿನ ಇಬ್ಬರನ್ನು ನೇಮಿಸುತ್ತಿದ್ದರು ; ಈ ಇಬ್ಬರಿಗೆ ೨ ಮೂರು ದಿನಗಳಲ್ಲಿ ದಿನಕ್ಕೆ ೬ ಗಂಟೆಗಳ ಕಾಲ ಕೆಲಸವಿತ್ತು ; 1913 ರ ಅನಂತರ ಚಾವಿಕೊಡಲು ವಿದ್ಯುತ್ ಮೋಟಾರನ್ನಿಟ್ಟರು.

## ಅಹಿಂಸಾ ನೀತಿ ಅತ್ಯುತ್ತಮ

ನ್ಯೂಯಾರ್ಕ್ 18— ಸ್ವಾತಂತ್ರ್ಯದ ಅಥವಾ ಜನಾಂಗ ಸಮಾನತೆಯ ಹೋರಾಟದಲ್ಲಿ, ಅಹಿಂಸಾತ್ಮಕ ಪ್ರತಿಭಟನೆಯು ಧೋರಣೆಯು ಅತಿ ಪರಿಣಾಮಕಾರಿ ಆಯುಧ ಎಂದು ಜನಾಂಗ ಪ್ರತ್ಯೇಕತೆಯನ್ನು ವಿರೋಧಿಸುವ ಮುಖಂಡ ಡಾ|| ಕಾರ್ಟಿಸ್ ಲೂಥರ್ ಕಿಂಗ್ ಇಂದು ಸಾರಿದರು — ಭಾರತದಲ್ಲಿ ಒಂದು ತಿಂಗಳ ಸುಜಯ ಅಮೇರಿಕಾಕ್ಕೆ ಆಗಮಿಸಿದನಂತರ ಅವರು ಈ ಹೇಳಿಕೆಯನ್ನಿತ್ತರು. ನ್ಯಾಷನಲ್ ಮುಂತ್ರಿ ನೆಹರೂರವರಾದ ತೊಡಗಿ ಗಣ್ಯಾನುಧಿಕಾರಿಗಳೂ ಮತ್ತು ಸಾಮಾನ್ಯ ಭಾರತೀಯರುವರೆಗೆ, ತಾನು ಭಾರತದ ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳೊಡನೆ ನಡೆಸಿದ ಮಾತುಕತೆ ಮತ್ತು ಈ ಪರ್ಯಾಲೋಚನೆಗಳಿಂದ ಸ್ವಾತಂತ್ರ್ಯವನ್ನು ಸಾಧಿಸುವಲ್ಲಿ ಜನಾಂಗ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಹಿಂಸಾತ್ಮಕ ಪ್ರತಿರೋಧವು ಅತಿ ಪರಿಣಾಮಕಾರಿ ಆಯುಧ ಎಂಬ ನನ್ನ ನಂಬಿಕೆಯು ಬೃಢವಾಯಿತು' ಎಂದು ಅವರು ಹೇಳಿದರು — ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ, ಡಾ|| ಕಿಂಗರು, ತಾನು ಆಫ್ರಿಕಾದ ವಿವಿಧ ಪ್ರದೇಶಗಳಲ್ಲಿನ ಜನರು ಈ ಧೋರಣೆಯನ್ನು ನುಸುರಬೇಕೆಂದು ಬಲವಾಗಿ ಪ್ರತಿಪಾದಿಸುತ್ತೇನೆ ಎಂದು ಹೇಳಿದರು — ಹಿಂಸೆಯ ಪ್ರಯೋಗವು ಯಶಸ್ವಿಯಾಗಿಲ್ಲ, ಅಹಿಂಸೆಯ ಸುಸಂಘಟಿತ ಧೋರಣೆಯು ಪರಕೀಯ ಜನರು ಉದಯೋಗಿಸಬಹುದಾದ ಅತಿ ಪ್ರಬಲ ಆಯುಧ ; ಮತ್ತು ಇದು ರಚನಾತ್ಮಕ ಮತ್ತು ಸ್ನೇಹಪರ ಇತ್ಯರ್ಥಗಳಿಗೆ ತಳಹದಿಯನ್ನು ನಿರ್ಮಿಸುತ್ತದೆ, ಎಂದು ಡಾ|| ಕಿಂಗ್ ಹೇಳಿದರು — ಹಿಂಸಾತ್ಮಯು ಕ್ರಾಂತಿಯಿಂದ ಸ್ವಾತಂತ್ರ್ಯ ಸಾಧಿಸಿಯಾದರೆ ದ್ವೇಷವು ಶಮನಾನಂತರದ ಪರಿಣಾಮವಾಗುವುದು ; ಭಾರತವು ಯುದ್ಧ ಮಾಡದೆ ತನ್ನ ಸ್ವಾತಂತ್ರ್ಯವನ್ನು ಗಳಿಸಿದುದರಿಂದ ಇಂದು ಭಾರತದ ಮತ್ತು ಬ್ರಿಟನ್ನಿನ ಜನರ ಮಧ್ಯೆ ಬಹಳ ಸ್ನೇಹವಿದೆ, ಎಂದವರು ಹೇಳಿದರು.


ಗುಡ ಫ್ರೈಡೆ ಪ್ರಯುಕ್ತ ನಾಳೆ ಪತ್ರಿಕೆಗೆ ರಜವಿದೆ

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ
ಅ ಶೋ ಕಾ ಫಾರ್ಮೆಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing
L. N. Press
Sivarampet, Mysore

ವುಡ್‌ಲಾಂಡ್ಸ್ ಜನಪ್ರಿಯ 2 ನೇ ವಾರ
ಕಾಲಾಪಾನಿ (ಹಿಂದಿ)
ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ
ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು
ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ. ಬರ್ಮನ್
ಅಪೆರಾ— 20-3-59 ರಿಂದ
ಅತ್ಯಮೋಘ ಕನ್ನಡ ಚಿತ್ರ ಪ್ರತಿದಿನ 3 ಆಟಗಳು
ಕಪ್ಪ ಗಾರುಡಿ (ಕನ್ನಡ)
ಲಕ್ಷ್ಮಣ
ತಾರಾ— ರಾಜಕುಮಾರ್, ಶ್ಯಾಮಸುಂದರ್‌ಶಾಸ್ತ್ರಿ, ನರಸಿಂಹರಾಜು, ಗಣಪತಿಭಟ್
ರಮಾದೇವಿ ರೇವತಿ, ಸೂರ್ಯಕಲಾ, ಲಲಿತಕಾರಾವ್ ಬಿ. ಎ.
SHAKTI SUDHA
A Superb Tonic
ಗೋಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೊತೆಲಿಗರಾಗಿರಿ
ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ
ಏಕೈಕ ಕನ್ನಡ ಪತ್ರಿಕೆ
ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳ
ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು
Advertise in Goraksana and help the pious ca
ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು


Edited, Printed & Published by Dharma Prachara
Krishna Rao, at the Satyavadi Press Chamarajapuram, Mys